**AUGUST 5,2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಪಶ್ಚಿಮಘಟ್ಟ ಹಾಗೂ ರಾಜ್ಯದ ಎಲ್ಲ ಘಟ್ಟ ಪ್ರದೇಶಗಳಲ್ಲಿ, 2015ರ ನಂತರದ ಒತ್ತುವರಿ ತೆರವು ಕಾರ್ಯಾಚರಣೆ, ಇಂದಿನಿಂದ ಆರಂಭ – ಈಶ್ವರ ಖಂಡ್ರೆ.**
- **ಸತತ ಮಳೆ ಹಾಗೂ ಪ್ರವಾಹ; ಬೆಳಗಾವಿ ಜಿಲ್ಲೆಯ 232 ಗ್ರಾಮಗಳು ಜಲಾವೃತ – ಸಂಸದ ಈರಣ್ಣ ಕಡಾಡಿ**
- **'ಸ್ವಾತಂತ್ರ್ಯ ಹೋರಾಟದಲ್ಲಿ ಧಾರವಾಡ ಜಿಲ್ಲೆಯ ಕೊಡುಗೆ' ಕುರಿತ, ಪಾಕ್ಷಿಕ ಪ್ರದರ್ಶಿನಿಗೆ ಇಂದು ಚಾಲನೆ – ರೇ ಾ ಸಾವಂತ.**
- **ಬಳ್ಳಾರಿ ಸೈಕ್ಲಿಂಗ್ ಕ್ಲಬ್: 'ರನ್ ಫಾರ್ ಸ್ಟೀಲ್ ಸಿಟಿ' ಮ್ಯಾರಾಥಾನ್ ಯಶಸ್ವಿ.**

<><><>

**ಈಗ ವಾರ್ತೆಗಳ ವಿವರ**

<><><>

**ಪಶ್ಚಿಮಘಟ್ಟ ಸೇರಿದಂತೆ, ರಾಜ್ಯದ ಎಲ್ಲ ಘಟ್ಟ ಪ್ರದೇಶಗಳಲ್ಲಿ ಅಕ್ರಮವಾಗಿ ತಲೆ ಎತ್ತಿರುವ ರೆಸಾರ್ಟ್ ಮತ್ತು ಹೋಂ ಸ್ಟೇ ತೆರವುಗೊಳಿಸಲು, ಪಶ್ಚಿಮಘಟ್ಟ ಅರಣ್ಯ ಒತ್ತುವರಿ ತೆರವು ಕಾರ್ಯಪಡೆ ರಚಿಸಲಾಗಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ ಈ ಕಾರ್ಯಪಡೆ ರಚಿಸಲಾಗಿದ್ದು, ಇಂದಿನಿಂದ ಕಾರ್ಯಾಚರಣೆ ಆರಂಭವಾಗಲಿದೆ ಎಂದು, ಸಚಿವರು ಸ್ಪ ್ಟಪಡಿಸಿದ್ದಾರೆ.**

**ಘಟ್ಟ ಪ್ರದೇಶದ ಅರಣ್ಯ ಸ್ಥಳಗಳಲ್ಲಿ, 2015ರ ನಂತರ ಆಗಿರುವ ಒತ್ತುವರಿ ಪ್ರಕರಣಗಳನ್ನು ತೆರವುಗೊಳಿಸಲು, ಕಾರ್ಯಾಚರಣೆ ಆರಂಭಿಸುವಂತೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.**

**ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಅಡ್ವೊಕೆಟ್ ಜನರಲ್ ಅವರೊಂದಿಗೆ ಸಮಾಲೋಚಿಸಲಾಗಿದೆ. ಮೊದಲಿಗೆ ದೊಡ್ಡ ಪ್ರಮಾಣದಲ್ಲಿ ಅರಣ್ಯ ಒತ್ತುವರಿ ಮಾಡಿ ನಿರ್ಮಿಸಲಾಗಿರುವ, ಅಕ್ರಮ**

ರೆಸಾರ್ಟ್ ಮತ್ತು ಹೋಂ ಸ್ಟೇಗಳನ್ನು ತೆರವುಗೊಳಿಸಿ, ಬಳಿಕ ಕಟ್ಟಡಗಳನ್ನು ತೆರವುಗೊಳಿಸುವಂತೆ ಸೂಚಿಸಲಾಗಿದೆ ಎಂದರು.

<><><>

ಸತತ ಮಳೆ ಹಾಗೂ ಪ್ರವಾಹದಿಂದ, ಬೆಳಗಾವಿ ಜಿಲ್ಲೆಯ 232 ಗ್ರಾಮಗಳು ಜಲಾವೃತಗೊಂಡಿವೆ; 47 ಸೇತುವೆಗಳು ಮುಳುಗಡೆಯಾಗಿ ಸಾರಿಗೆ ಸಂಪರ್ಕ ಕಡಿತಗೊಂಡಿದೆ ಎಂದು, ರಾಜಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಜಿಲ್ಲೆಯಲ್ಲಿ ಒಟ್ಟು 45 ಕಾಳಜಿ ಕೇಂದ್ರಗಳಲ್ಲಿ ನಾಲ್ಕು ಸಾವಿರದ 7 ನೂರಾ 64 ಕ್ಕಿಂತ ಹೆಚ್ಚು ಕುಟುಂಬಗಳ, 12 ಸಾವಿರದ ನಾಲ್ಕುನೂರಾ 55 ಜನ ಸಂತ್ರಸ್ತರು, ಆಶ್ರಯ ಪಡೆದಿದ್ದಾರೆ. 5 ಸಾವಿರದ 9 ನೂರಾ 34 ಜನ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ. ಅವರಿಗೆ ಸರಕಾರ ನೆರವು ನೀಡಬೇಕಿದೆ ಎಂದರು.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, ಕಳೆದ ಜುಲೈ ತಿಂಗಳಿನಲ್ಲಿ, ವಾಡಿಕೆಗಿಂತ ಶೇಕಡ 81 ರ ಷ್ಟು ಅತ್ಯಧಿಕ ಮಳೆಯಾಗಿದ್ದು, ಅಪಾರ ಪ್ರಮಾಣದ ಹಾನಿಯಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

ವ್ಯಾಪಕ ಮಳೆಯಿಂದಾಗಿ ಈ ವರೆಗೆ 13 ಜನ ಸಾವನ್ನಪ್ಪಿದ್ದಾರೆ. 935 ಮನೆಗಳಿಗೆ ಹಾನಿಯಾಗಿದೆ. 383 ಹೆಕ್ಟರ್ ಕೃಷಿ ಭೂಮಿ ಮತ್ತು 2 ಸಾವಿರದ 151 ಹೆಕ್ಟರ್ ತೋಟಗಾರಿಕಾ ಪ್ರದೇಶಕ್ಕೆ ಹಾನಿಯಾಗಿದೆ. ಜೀವ ಹಾನಿಗೆ ಈಗಾಗಲೇ 65 ಲಕ್ಷ ರೂಪಾಯಿ ಪರಿಹಾರ ನೀಡಲಾಗಿದೆ. ಮನೆಗಳ ಹಾನಿಗೆ ಈ ವರೆಗೆ 1 ಕೋಟಿ 76 ಲಕ್ಷ ರೂಪಾಯಿ ಪರಿಹಾರ ವಿತರಿಸಲಾಗಿದೆ ಎಂದರು.

<><><>

ಉನ್ನತ ಶಿಕ್ಷಣ ಸಂಸ್ಥೆಗಳ ಮಾನ್ಯತೆಯಲ್ಲಿ ಸುಧಾರಣೆಗಳನ್ನು ತರಲು, ಡಾಕ್ಟರ್ ರಾಧಾಕೃ ಷ್ಣನ್ ಸಮಿತಿ ಶಿಫಾರಸುಗಳ ಅನ್ವಯ, ಗ್ರಾಮೀಣ ಮತ್ತು ದೂರವರ್ತಿ ಸ್ಥಳಗಳಲ್ಲಿರುವ ಸಂಸ್ಥೆಗಳು ಎದುರಿಸುತ್ತಿರುವ ಸವಾಲುಗಳನ್ನು ಅರ್ಥಮಾಡಿಕೊಳ್ಳಲು, ನ್ಯಾಕ್ ವತಿಯಿಂದ, ಇಂದು, ಮಹತ್ವಾಕಾಂಕ್ಷೆ ಜಿಲ್ಲೆಗಳ ಹಾಗೂ ದೇಶಾದ್ಯಂತದ ಇತರ ಗ್ರಾಮೀಣ ಸ್ಥಳಗಳ ಪ್ರಾಂಶುಪಾಲರಿಗೆ, ಬೆಂಗಳೂರಿನ ನಾಗರಬಾವಿಯ ನ್ಯಾಕ್ ಸಭಾ ಭವನದಲ್ಲಿ ಇಂದು ಬೆಳಗ್ಗೆ 10 ಗಂಟೆಯಿಂದ ಕಾರ್ಯಾಗಾರವನ್ನು ಆಯೋಜಿಸಿದೆ.

<><><>

'ಸ್ವಾತಂತ್ರ್ಯ ಹೋರಾಟದಲ್ಲಿ ಧಾರವಾಡ ಜಿಲ್ಲೆಯ ಕೊಡುಗೆ' ಕುರಿತು, ಧಾರವಾಡ ಜಿಲ್ಲಾಡಳಿತ, ಸ್ವಾತಂತ್ರ್ಯೋತ್ಸವದ ಐತಿಹಾಸಿಕ ಹಿರಿಮೆ ಸಾರುವ ಪಾಕ್ಷಿಕ ಪ್ರದರ್ಶಿನಿ ಆಯೋಜಿಸಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ, ಧಾರವಾಡ ವಲಯ ಕಚೇರಿ, ಇಂದಿನಿಂದ 9 ನೇ ತಾರೀಖು ವರೆಗೆ, 'ಉತ್ತರ ಕರ್ನಾಟಕದ ವಾಸ್ತುಶಿಲ್ಪ ಪರಂಪರೆ ಹಾಗೂ ಸ್ಮಾರಕಗಳು ಅಂದು ಮತ್ತು ಇಂದು' ಎಂಬ ವಿ ಯ ಕುರಿತು, ಛಾಯಾಚಿತ್ರ ಪ್ರದರ್ಶನವನ್ನು, ಧಾರವಾಡದ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದೆ.

ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ, ಎಲ್ಲರೂ ಪ್ರದರ್ಶಿನಿ ವೀಕ್ಷಿಸಬಹುದಾಗಿದೆ ಎಂದು, ಧಾರವಾಡ ವಲಯದ ಅಧೀಕ್ಷಕ ಪುರಾತತ್ವ ಅಧಿಕಾರಿ ಡಾಕ್ಟರ್ ರೇ ್ಮಾ ಸಾವಂತ್ ತಿಳಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ಮುಡಾ' ಹಗರಣವನ್ನು ಮುಂದಿಟ್ಟುಕೊಂಡು, ಬಿಜೆಪಿ ಹಾಗೂ ಜೆಡಿಎಸ್ ಕೈಗೊಂಡಿರುವ ಪಾದಯಾತ್ರೆ, ನಿನ್ನೆ 2ನೇ ದಿನಕ್ಕೆ ಕಾಲಿರಿಸಿತು.

ಬಿಡದಿಯಿಂದ ಆರಂಭಗೊಂಡ ಪಾದಯಾತ್ರೆಯಲ್ಲಿ, ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕೆ ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನ ಪರಿ 'ತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಪಾಲ್ಗೊಂಡಿದ್ದರು.

<><><>

ಮೈಸೂರಿನ 'ಮುಡಾ' ಪ್ರಕರಣದ ನೈತಿಕ ಹೊಣೆ ಹೊತ್ತು, ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕು; ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸುವಂತೆ, ಕೇಂದ್ರ ನವ ಹಾಗೂ ನವೋದ್ಯಮ ಖಾತೆ ಸಚಿವ ಪ್ರಲ್ಹಾದ ಜೋಶಿ, ಆಗ್ರಹಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಅವ್ಯವಹಾರ ಸೇರಿದಂತೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಕಳೆದ ಒಂದೂವರೇ ವರ್ಷದಲ್ಲಿ, ವಿವಿಧ ಭ್ರಷ್ಟಾಚಾರದಲ್ಲಿ ಭಾಗಿಯಾಗಿದೆ. ರಾಜ್ಯ ಸರ್ಕಾರ ಕಳೆದ ಒಂದೂವರೇ ವರ್ಷದಲ್ಲಿ ಅಭಿವೃದ್ಧಿಯನ್ನು ಕಡೆಗಣಿಸಿದೆ ಎಂದು, ದೂರಿದರು.

<><><>

ಗೋಡೆ ಕುಸಿದು ಮೃತಪಟ್ಟ, ಧಾರವಾಡ ತಾಲೂಕಿನ ವೆಂಕಟಾಪೂರ ಗ್ರಾಮದ, ಯಲ್ಲಪ್ಪ ಹಿಪ್ಪಿಯವರ ಮನೆಗೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭೇಟಿ ನೀಡಿ, ಪರಿಹಾರ ಒದಗಿಸಿ, ಕುಟುಂಬಕ್ಕೆ ಸಾಂತ್ವನ ಹೇಳಿದರು. ಗಾಯಾಳುಗಳಾಗಿದ್ದ ಯಲ್ಲಪಪ್ಪ ಅವರ ಪತ್ನಿ ಹಾಗೂ ಮಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದರು.

<><><>

ಯಾದಗಿರಿ ನಗರದ ಠಾಣೆಯ ಪಿಎಸ್ಐ ಪರಶುರಾಮ್ ಅನುಮಾಸ್ಪದ ಸಾವಿನ ಪ್ರಕರಣ ತನಿಖೆಗೆ ಅಪರಾಧ ತನಿಖಾ ದಳ ಸಿಐಡಿ ತಂಡ, ನಿನ್ನೆ ಭೇಟಿ ನೀಡಿ ಎಫ್.ಐ.ಆರ್ ಪ್ರತಿ, ಪಂಚನಾಮೆ ವರದಿ, ವಿವಿಧ ಆಯಾಮಗಳ ವಿವರ ಸೇರಿದಂತೆ ಪ್ರಾಥಮಿಕ ಮಾಹಿತಿ ಸಂಗ್ರಹಿಸಿದೆ ಎಂದು ಮೂಲಗಳು ತಿಳಿಸಿವೆ.

ಕೂಡಲೇ ಸಿ.ಬಿ.ಐ ತನಿಖೆಗೆ ಆದೇಶಿಸಬೇಕೆಂದು ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ. ಮೃತ ಪರಶುರಾಮ್ ಅವರ ಕೊಪ್ಪಳ ಜಿಲ್ಲೆ ಕಾರಟಗಿ ತಾಲೂಕಿನ, ಸೋಮನಾಳ ಗ್ರಾಮದ ಮನೆಗೆ ಭೇಟಿ ನೀಡಿದ ಆರ್. ಅಶೋಕ್, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

<><><>

ಧಾರವಾಡದ, ಕರ್ನಾಟಕ ವ್ಯಂಗ್ಯಚಿತ್ರ ಸಾಹಿತ್ಯ ಕಲಾ ಮಾಧ್ಯಮ, ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ. ದೇಶಪಾಂಡೆ ಸಭಾಭವನದಲ್ಲಿ, ರಾಜ್ಯ ಮಟ್ಟದ ವ್ಯಂಗ್ಯ ಚಿತ್ರ ಕಲಾ ಪ್ರದರ್ಶನ ಆಯೋಜಿಸಿತ್ತು.

ರಾಜ್ಯದ 20ಕ್ಕೂ ಹೆಚ್ಚು ಖ್ಯಾತನಾಮ ವ್ಯಂಗ್ಯಚಿತ್ರಕಾರರ ಕಲಾಕೃತಿಗಳು, ಜನಮನ ಸೂರೆಗೊಂಡವು. ಯುವ ಪೀಳಿಗೆಯ ವೀಕ್ಷಕರ ಮುಖದಲ್ಲಿ ನಗೆ ಅರಳಿಸಿದವು.

ವ್ಯಂಗ್ಯಚಿತ್ರಕಾರ ಶ್ರೀನಿವಾಸ ಹುದ್ದಾರ ಅವರ, 'ಹಾಸ್ಯ ಪಯಣ' ಕೃತಿಯನ್ನು, ಖ್ಯಾತ ಕಲಾವಿದ, ವಿಜ್ಞಾನ ಶಿಕ್ಷಕ ಸುರೇಶ ಕುಲಕರ್ಣಿ ಬಿಡುಗಡೆ ಮಾಡಿದರು.

<><><>

ಹಿರಿಯ ವ್ಯಂಗ್ಯಚಿತ್ರಕಾರ ಹಾಗೂ ಆಕಾಶವಾಣಿ ನಾಟಕಕಾರ ಅಶೋಕ ಜೋಶಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಅಶೋಕ ಜೋಶಿ ಧ್ವನಿ 41 ಸೆಕೆಂದುಗಳು

<><><>

'ಕರ್ನಾಟಕ' ನಾಮಕರಣದ 50ನೇ ವರ್ಷಾಚರಣೆ, ಸುವರ್ಣ ಸಂಭ್ರಮದ ಹಿನ್ನೆಲೆ, "ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ' ಅಭಿಯಾನದ, ಕನ್ನಡ ಜ್ಯೋತಿ ರಥಯಾತ್ರೆ, ಇಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಆಗಮಿಸಲಿದೆ.

ಕೋಲಾರದ ಮಾಲೂರಿನಿಂದ, ಹೊಸಕೋಟೆಗೆ ರಥಯಾತ್ರೆ ಆಗಮಿಸಲಿದ್ದು, ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕನ್ನಡ ರಥಯಾತ್ರೆ ಸಂಚರಿಸಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎನ್.ರವಿಕುಮಾರ್ ತಿಳಿಸಿದ್ದಾರೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ವಿಶ್ರಾಂತ ಕುಲಪತಿ ದಿವಂಗತ ಡಾಕ್ಟರ್ ಎಸ್.ಎ.ಪಾಟೀಲ ಜನ್ಮ ದಿನಾಚರಣೆ ನಿಮಿತ್ತ, ಅವರ ಸ್ಮರಣಾರ್ಥ, ಡಾಕ್ಟರ್ ಎಸ್.ಡಬ್ಲ್ಯು. ಮೆಣಸಿನಕಾಯಿ ಎಜ್ಯುಕೇಶನ್ ಆಂಡ್ ರಿಸರ್ಚ್ ಫೌಂಡೇಶನ್ ಸಹಯೋಗದಲ್ಲಿ, ಇಂದು ಮಧ್ಯಾಹ್ನ 3 ಗಂಟೆಗೆ, ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ ಮಾಜಿ ನಿರ್ದೇಶಕ, ಪದ್ಮಶ್ರೀ ಡಾಕ್ಟರ್ ಎಸ್. ಅಯ್ಯಪ್ಪನ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾಕ್ಟರ್ ಪಿ.ಎಲ್. ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

<><><>

ಪ್ಯಾರಾಲಿಂಪಿಕ್ಸ್, ಕಾಮನ್ ವೆಲ್ತ್ ಸೇರಿದಂತೆ ವಿವಿಧ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ವಿಜೇತ 12 ಕ್ರೀಡಾಪಟುಗಳನ್ನು ರಾಜ್ಯ ಸರ್ಕಾರ ವಿವಿಧ ಸರ್ಕಾರಿ ಹುದ್ದೆಗಳಿಗೆ ನೇಮಕ ಮಾಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ ಸಾಧಕ ಕ್ರೀಡಾಪಟುಗಳಿಗೆ ನೇಮಕಾತಿ ಪತ್ರ ಹಸ್ತಾಂತರಿಸಿದರು.

ಭಾನುವಾರ ಗೃಹ ಕಚೇರಿ ಕೃಷ್ಣಾದಲ್ಲಿ ನೇಮಕ ಪತ್ರ ನೀಡಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ, ಕ್ರೀಡಾ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಎಲ್ಲ ಕ್ರೀಡಾ ಚಟುವಟಿಕೆಗಳಿಗೆ ಎಲ್ಲ ರೀತಿಯ ನೆರವು ನೀಡಲು ಸರ್ಕಾರ ಬದ್ಧವಾಗಿದೆ ಎಂದರು.

<><><>

ಬಳ್ಳಾರಿ ಸೈಕ್ಲಿಂಗ್ ಕ್ಲಬ್ ವತಿಯಿಂದ, 'ರನ್ ಫಾರ್ ಸ್ಟೀಲ್ ಸಿಟಿ' ಕಾರ್ಯಕ್ರಮ ಆಯೋಜಿತವಾಗಿತ್ತು. 11 ರಾಜ್ಯಗಳ 4 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗಿಯಾಗಿದ್ದರು.

10 ಕಿಲೋ ಮೀಟರ್ ಓಟದಲ್ಲಿ, ರಾಹುಲ್ ಚಂದನ್ ಹಾಗೂ 5 ಕಿಲೋ ಮೀಟರ್ ಓಟದಲ್ಲಿ, ಶಿವಾನಂದ ಲಕ್ಷ್ಮಣ ಪ್ರಥಮ ಸ್ಥಾನಗಳಿಸಿದ್ದಾರೆ.

ಜನರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ, ಜಾಗ್ರತಿ ಮೂಡಿಸಲು, ಕಳೆದ 3 ವ ’ಗಳಿಂದ, ಈ ಓಟವನ್ನು ಆಯೋಜಿಸಲಾಗುತ್ತಿದೆ.

<><><>

ಪ್ಯಾರಿಸ್ ಒಲಂಪಿಕ್ಸ್‌ನಲ್ಲಿ ನಿನ್ನೆ, ಭಾರತ ಹಾಕಿ ತಂಡ, ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ, ಬ್ರಿಟನ್ ವಿರುದ್ಧ ಜಯಗಳಿಸಿ, ಸೆಮಿ ಫೈನಲ್ ಪ್ರವೇಶಿಸಿದೆ.

<><><>

ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಕ್ರೀಡಾಕೂಟದ ಪ್ರಸಾರದ ಹಿನ್ನೆಲೆ, ಬೆಳಗ್ಗೆ 7-35ಕ್ಕೆ ಪ್ರಸಾರವಾಗುತ್ತಿದ್ದ ರಾಷ್ಟ್ರೀಯ ವಾರ್ತೆಗಳು, ಈ ತಿಂಗಳ 11ರ ವರೆಗೆ ಬೆಳಗ್ಗೆ 9 ಗಂಟೆ 5 ನಿಮಿ ’ಕ್ಕೆ ಪ್ರಸಾರವಾಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಭೀಮನ ಅಮಾವಾಸ್ಯೆ ಪ್ರಯುಕ್ತ, ರಾಜ್ಯಾದ್ಯಂತ ದೇವಾಲಯಗಳಲ್ಲಿ ವಿಶೇ ’ ಪೂಜಾ ಕೈಂಕರ್ಯ ಜರುಗಿದವು.

ಭೀಮನ ಅಮಾವಾಸ್ಯೆ ಪ್ರಯುಕ್ತ ಕೋಲಾರ ಜಿಲ್ಲೆಯ, ವೇಮಗಲ್ ಪಟ್ಟಣದ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ, ವಿಶೇ ’ ಪೂಜಾ ಮಹೋತ್ಸವ ಆಯೋಜಿಸಲಾಗಿತ್ತು.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆ, ಚಿತ್ರದುರ್ಗದಲ್ಲಿ ಇದೇ 11 ರಿಂದ 13ರ ವರೆಗೆ ಪಥ ಸಂಚಲನ, ಕವಾಯತು ಪೂರ್ವಾಭ್ಯಾಸ ನಡೆಯಲಿದೆ ಎಂದು, ಜಿಲ್ಲಾ ಪೊಲೀಸ್ ವರಿ ್ಠಾಧಿಕಾರಿ, ಧರ್ಮೇಂದ್ರ ಕುಮಾರ್ ಮೀನಾ ಹೇಳಿದ್ದಾರೆ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಪಶ್ಚಿಮಘಟ್ಟ ಹಾಗೂ ರಾಜ್ಯದ ಎಲ್ಲ ಘಟ್ಟ ಪ್ರದೇಶಗಳಲ್ಲಿ, 2015ರ ನಂತರದ ಒತ್ತುವರಿ ತೆರವು ಕಾರ್ಯಾಚರಣೆ, ಇಂದಿನಿಂದ ಆರಂಭ – ಈಶ್ವರ ಖಂಡ್ರೆ.
- ಸತತ ಮಳೆ ಹಾಗೂ ಪ್ರವಾಹ: ಬೆಳಗಾವಿ ಜಿಲ್ಲೆಯ 232 ಗ್ರಾಮಗಳು ಜಲಾವೃತ – ಸಂಸದ ಈರಣ್ಣ ಕಡಾಡಿ
- ‘ಸ್ವಾತಂತ್ರ್ಯ ಹೋರಾಟದಲ್ಲಿ ಧಾರವಾಡ ಜಿಲ್ಲೆಯ ಕೊಡುಗೆ’ ಕುರಿತ, ಪಾಕ್ಷಿಕ ಪ್ರದರ್ಶಿನಿಗೆ ಇಂದು ಚಾಲನೆ – ರೇ ್ಮಾ ಸಾವಂತ್.
- ಬಳ್ಳಾರಿ ಸೈಕ್ಲಿಂಗ್ ಕ್ಲಬ್; ‘ರನ್ ಫಾರ್ ಸ್ಟೀಲ್ ಸಿಟಿ’ ಮ್ಯಾರಾಥಾನ್ ಯಶಸ್ವಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.

<><><>

ಸೋಮಣ್ಣ/ವಂದೇ ಭಾರತ

ಬೆಂಗಳೂರು–ಕಲಬುರಗಿ ಮಧ್ಯದ ವಂದೇ ಭಾರತ್ ರೈಲು, ಯಾದಗಿರಿ ನಿಲ್ದಾಣದಲ್ಲಿ ನಿಲುಗಡೆಯಾಗಲಿದೆ.

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ವರ್ಚುವಲ್ ವೇದಿಕೆ ಮೂಲಕ, ಹಸಿರು ಧ್ವಜ ತೋರಿದ್ದಾರೆ.

ಬಳಿಕ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡ ಸಚಿವರು, ರೈಲ್ವೆ ನೇಮಕಾತಿ ಮಂಡಳಿ ನಡೆಸುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳನ್ನು, ಕನ್ನಡದಲ್ಲಿಯೂ ಬರೆಯಲು ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ರೈಲ್ವೆ ನೇಮಕಾತಿ ಮಂಡಳಿಯಿಂದ ಶೀಘ್ರದಲ್ಲೇ ಸುತ್ತೋಲೆ ಹೊರಡಿಸಲಾಗುವುದು.

ಇತ್ತೀಚೆಗೆ ಲೋಕೋ ಪೈಲಟ್ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು, ಕನ್ನಡದಲ್ಲಿ ಬರೆಯಲು ಅವಕಾಶವಿಲ್ಲದೇ ಇರುವುದರಿಂದ ಇದರ ಬಗ್ಗೆ ತಕ್ಷಣವೇ ಗಮನಹರಿಸುವಂತೆ ರೈಲ್ವೆ ಮಂಡಳಿ ಪ್ರಧಾನ ವ್ಯವಸ್ಥಾಪಕರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಹರ್ಷ/ಹೊಂಗಲ್/ಸಚಿವರ ಎಕ್ಸ್ ಜಾಲತಾಣ/ಟಿಟಿಸಿ ಯಾದಗಿರಿ